# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 04/12/2021 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1) ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

2) ಆರೋಗ್ಯ: ಕೇಲವು ಪ್ರದೇಶಗಳಿಗೆ ಪಿ.ಕೆ ಗಳು ಕಸ ಗೂಡಿಸಲು ಯಾರು ಬರುವುದಿಲ್ಲ ಎಂದು ಸಭೆಯಲ್ಲಿ ದೂರಿದರು, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಪ್ರತಿ ನಿತ್ಯ ತಪಾಸಣೆ ನಡೆಸಿ ಸರಿಯಾಗಿ ಪಿ.ಕೆ ಗಳು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ದೂರು ಬಾರದಂತೆ ಕೆಲಸ ನಡೆಸುವುದಾಗಿ ಸಭೆಗೆ ತಿಳಿಸಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಕೋರೋನಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಲಸಿಕೆ ಹಾಕದವರನ್ನು ಗುರುತಿಸಿ ವ್ಯಾಕ್ಸಿನೇಶನ್ ಮಾಡುತ್ತಿರುವುದಾಗಿ ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿ ರವರು ಮಾತಾನಾಡುತ್ತ, ತಮ್ಮ ಮನೆಯ ಸುತ್ತಮುತ್ತ ಯಾರು ವ್ಯಾಕ್ಸಿನೇಶನ್ ಮಾಡಿಕೊಂಡಿರುವುದಿಲ್ಲವೋ ಅಂತವರನ್ನು ಗುರುತಿಸಿ ವ್ಯಾಕ್ಸಿನೇಶನ್ ಮಾಡಿಸಬೇಕೆಂದು ಸಭೆಯನ್ನು ಕೋರಿದರು.

3) ವಿದ್ಯುತ್ ದೀಪ ಮತ್ತು ಬೆಸ್ಕಾಂ: ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಶೇಷಾದ್ರಿಪುರಂ 2ನೇ ಮುಖ್ಯರಸ್ತೆಯಲ್ಲಿ ವಿದ್ಯುತ್ ಸರಬರಾಜು ಇಲ್ಲದೇ ಇರುವುದರ ಬಗ್ಗೆ ಸಭೆಯಲ್ಲಿ ತಿಳಿಸಿರುವುದಾಗಿ ಹಾಗೇಯೇ ಆಂಜನೇಯ ಬ್ಲಾಕ್‌ನಲ್ಲಿ ಬೀದಿ ದೀಪ ಅಳವಡಿಸಲು ಮತ್ತು ಮಲ್ಲೇಶ್ವರಂ ಸರ್ಕಲ್‌ನಲ್ಲಿ ಬೀದಿ ದೀಪವನ್ನು ಅಳವಡಿಸಲು ತುರ್ತಾಗಿ ಸದಸ್ಯರುಗಳು ಸಭೆಗೆ ಕೋರಿದರು. ಹಾಗೇಯೇ 4ನೇ ಅಡ್ಡ ರಸ್ತೆಯಲ್ಲಿ ಶನಿಮಹಾತ್ಮ ದೇವಸ್ಥಾನ ಹತ್ತಿರ ವಿದ್ಯುತ್ ಕಂಬದಲ್ಲಿ ವೈರ್‌ಗಳು ಕೈಗೆಟ್ಟುಕುವ ಎತ್ತರದಲ್ಲಿರುತ್ತಾವೆ.

ಇದನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

4) ಜಿಯೋ ಕೇಬಲ್ ಮತ್ತು ಏರಟೇಲ್ ಕೇಬಲ್‌ಗಳಿಗೆ ಸಂಬಂಧಿಸಿದಂತೆ ಗುಂಡಿಗಳನ್ನು ಹೊಡೆದು ಸಮರ್ಪಕವಾಗಿ ಮುಚ್ಚದೇ ಇರುವುದರಿಂದ ಸಾರ್ವಜನಿಕರು ಬಿದ್ದು, ತೊಂದರೆ ಅನುಭವಿಸುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ ನೋಡಲ್ ಅಧಿಕಾರಿ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟವರಿಂದ ಸರಿಪಡಿಸಬೇಕೆಂದು ವಾರ್ಡ್ ಇಂಜಿನಿಯರ್‌ಗೆ ಸೂಚಿಸಿದರು.

5) ಮನೆಯನ್ನು ಕಟ್ಟಿದ ನಂತರ ಡೆಬ್ರಿಸ್‌ಗಳನ್ನು ತೆಗೆಯುತ್ತಿಲ್ಲ ಆದ್ದರಿಂದ ಸಂಬಂಧಪಟ್ಟ ಮಾಲಿಕರಿಗೆ ನೋಟಿಸ್ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

6) ರಾಜಶಂಕರ ಆಟದ ಮೈದಾನಕ್ಕೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆದಾರರು ಸಮರ್ಪಕವಾಗಿ ಬೋರ್‌ವೆಲ್ ಪೈಪ್‌ಲೈನ್‌ನ್ನು ಅಳವಡಿಸದೇ ನಿರ್ವಹಿಸುತ್ತಿರುವುದು ಸಭೆಯ ಗಮನಕ್ಕೆ ಬಂದಿದ್ದು, ಇದನ್ನು ಸರಿಪಡಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಧ್ಯಕ್ಷರ/ನೋಡಲ್ ಅಧಿಕಾರಿಯ ಅನುಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

**ಪ್ರತಿಯನ್ನು:-**

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.